ದಿನಾಂಕಃ **15.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು **:** ಪ್ರತಿವಾದಿಯ ಪರ ಶ್ರೀ ಎಸ್**.**ಎನ್**.**ಎಲ್**.** ವಕೀಲರಿಂದಃ

02. ಎಂ.ಎಂ. ಚನ್ನಯ್ಯ, ಮಲ್ಲಿಕಾರ್ಜುನ, ಕೆ.ಎನ್. ಸಿದ್ದೇಶ್, ಮಹೇಶ್ವರಪ್ಪ ಮತ್ತು ನಟರಾಜ ಇವರೆಲ್ಲಾ ಸೇರಿ ಯಾವ ದಿನಾಂಕದಂದು ಅಗ್ರೀಮೆಂಟ್ ಮಾಡಿಕೊಂಡಿದ್ದರು? ಎಂದರೆ 2018 ಇಸವಿಯಲ್ಲಿ ಮಾಡಿಕೊಂಡಿದ್ದರು. ಸದರಿ ಕರಾರನ್ನು ನಾನು ರೂ. 29 ಲಕ್ಷಗಳಿಗೆ ಮಾಡಿಕೊಂಡಿದ್ದೆ. ನಾನು ಸದರಿ ರೂ. 29 ಲಕ್ಷ ಮೊತ್ತವನ್ನು 3 ಹಂತಗಳಲ್ಲಿ ಬ್ಯಾಂಕ್ ಮೂಲಕ, ನಗದು ಹಣವಾಗಿ ಮತ್ತು ಚೆಕ್ ಮೂಲಕ ಕೊಟ್ಟಿದ್ದೆ. ಆ ರೀತಿ 3 ಹಂತದಲ್ಲಿ ರೂ. 29 ಲಕ್ಷ ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೇನೆ. 2018 ರ ಅಗ್ರೀಮೆಂಟ್ ಬಗ್ಗೆ 1 ರಿಂದ 3 ನೇ ವಾದಿಗಳಿಗೆ ಮಾಹಿತಿ ಇಲ್ಲವೆಂದರೆ ಸರಿಯಲ್ಲ. ವಾದಿಗಳು ಎಂ.ಎಂ. ಚನ್ನಯ್ಯ ಅವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. 2018 ರ ಅಗ್ರೀಮೆಂಟ್ ಲ್ಲಿ ವಾದಿಗಳು ಸಹಿಗಳನ್ನು ಮಾಡಿದ್ದಾರೆಯೇ? ಎಂದರೆ ಮಾಡಿದ್ದಾರೆ. ಎಂ.ಎಂ. ಚನ್ನಯ್ಯ ಯಾವಾಗ ತೀರಿಕೊಂಡರು? ಎಂದರೆ ಕೋರೋನಾ ಅಲೆಯಲ್ಲಿ ತೀರಿಕೊಂಡರು.

03. ಈ ದಾವೆಯನ್ನು ಯಾವ ಇಸವಿಯಲ್ಲಿ ದಾಖಲು ಮಾಡಿದ್ದೀರಿ? ಎಂದರೆ 2019 ರಲ್ಲಿ ದಾಖಲು ಮಾಡಿದ್ದೇವೆ. ದಾವೆ ಹಾಕುವಾಗ ಎಂ.ಎಂ. ಚನ್ನಯ್ಯ ಜೀವಂತವಿರಲಿಲ್ಲ ಎಂದರೆ ಇದ್ದರು. ಚನ್ನಯ್ಯ ಬದುಕಿದ್ದಾಗಲೇ ದಾವೆಯನ್ನು ಯಾಕೆ ಸಲ್ಲಿಸಲಿಲ್ಲ ಎಂದರೆ ಅವರು ಇರುವವರೆಗೂ ಹಣ ಕೊಡುತ್ತಾರೆ ಎಂಬ ನಿರೀಕ್ಷೆಯಲ್ಲಿ ಸುಮ್ಮನೆ ಇದ್ದು ನಂತರ ಅವರು ತೀರಿಕೊಂಡಿದ್ದರಿಂದ ದಾವೆ ಹಾಕಿದ್ದೇವೆ. ದಾವೆ ಹಾಕುವಾಗ 2019 ರಲ್ಲಿ ಚನ್ನಯ್ಯ ಜೀವಂತವಿದ್ದರು ಎಂದು ನಾನು ಹೇಳಿದ್ದು, ಈ ದಾವೆಗೆ ಚನ್ನಯ್ಯರವರನ್ನು ಪಕ್ಷಕಾರರಾಗಿ ಮಾಡದೇ ಅವರ ಹೆಂಡತಿ ಮಕ್ಕಳನ್ನು ಯಾಕೆ ಸೇರಿಸಿದ್ದೀರಿ? ಎಂದರೆ ಚನ್ನಯ್ಯನವರಿಗೆ ಹುಷಾರಿಲ್ಲದ ಕಾರಣ ಹಾಗೇ ಮಾಡಿದ್ದೇವೆ. ಚನ್ನಯ್ಯನವರಿಗೆ ಹುಷಾರಿಲ್ಲದ ಕಾರಣ ಅವರ ಜಿ.ಪಿ.ಎ ಪಡೆದು ದಾವೆ ಸಲ್ಲಿಸಿದ ಬಗ್ಗೆ ಜಿ.ಪಿ.ಎ ಹಾಜರು ಮಾಡಿದ್ದೀರಾ? ಎಂದರೆ ಮಾಡಿದ್ದೇನೆ. ಚನ್ನಯ್ಯ ಬದುಕಿದ್ದಾಗಲೇ ಅವರ ಮತ್ತು ಪ್ರತಿವಾದಿಯ ನಡುವಿನ ಕರಾರಿನ ವ್ಯವಹಾರ ಪೂರ್ಣಗೊಂಡಿದ್ದರೂ ಅವರ ಮೃತಪಟ್ಟ ನಂತರ 2021 ನೇ ಇಸವಿಯಲ್ಲಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

04. ನಿಪಿ5 ರಿಂದ ನಿಪಿ67 ರ ಅಗ್ರೀಮೆಂಟ್ ಗಳನ್ನು ಯಾರು ಯಾರು ಬರೆಯಿಸಿದ್ದರು? ಎಂದರೆ ಚನ್ನಯ್ಯ ಮತ್ತು ಪ್ರತಿವಾದಿ ಮಲ್ಲಿಕಾರ್ಜುನ ಬರೆಯಿಸಿದ್ದರು. ಕರಾರಿಗೆ ದಿನಾಂಕ ನಮೂದಿಸಿ ಮೊದಲನೇ ಪಾರ್ಟಿ ಮತ್ತು ಎರಡನೇ ಪಾರ್ಟಿ ಹಾಗೂ ಸಾಕ್ಷಿಗಳ ಸಹಿಗಳನ್ನು ಪಡೆಯುತ್ತಾರೆ ಎಂದರೆ

ಸರಿ. ನಿಪಿ5 ರಿಂದ ನಿಪಿ67 ದಾಖಲೆಗಳಲ್ಲಿ 2 ನೇ ಪಾರ್ಟಿಯ ಸಹಿ ಮತ್ತು ಸಾಕ್ಷಿಗಳ ಸಹಿಗಳು ಇರುವುದಿಲ್ಲ ಎಂದರೆ ಸರಿ. ನಿಪಿ5 ರ ದಾಖಲೆಯಲ್ಲಿ ದಿನಾಂಕ 27.03.2018 ರಂದು ಪ್ರಿಂಟ್ ತೆಗೆಯಿಸಿ ದಿನಾಂಕ 09.03.2018 ಎಂಬ ದಿನಾಂಕವನ್ನು ತಿದ್ದಿ ದಿನಾಂಕ 09.04.2018 ಎಂದು ಮಾಡಿರುವಂತೆ ಕಾಣುತ್ತಿದೆ ಎಂದರೆ ತಿದ್ದುಪಡಿ ಆಗಿರುವುದು ನಿಜ. ನಿಪಿ6 ರಲ್ಲಿ ಆ ದಾಖಲೆಯನ್ನು ದಿನಾಂಕ 27.03.2018 ರಂದು ಪ್ರಿಂಟೌಟ್ ತೆಗೆಸಿದಂತೆ ಇದ್ದು, ಸಹಿ ಮಾಡಿದ ದಿನಾಂಕ 05.03.2018 ಅಂದರೆ ದಾಖಲೆ ಪ್ರಿಂಟ್ ತೆಗೆಯುವ ಮುಂಚೆಯೇ ಸಹಿ ಮಾಡಿದಂತೆ ನಮೂದಾಗಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ಮೂಲ ದಾಖಲೆಗಳನ್ನು ಚನ್ನಯ್ಯನವರು ಪ್ರತಿವಾದಿಗೆ ಬರೆದು ಕೊಟ್ಟಿದ್ದಾರೆ ಎಂದಿದ್ದು, ಹಾಗಾದರೆ ಸದರಿ ಮೂಲ ದಾಖಲೆಗಳು ನನಗೆ ಹೇಗೆ ದೊರೆತವು? ಎಂದರೆ ಚನ್ನಯ್ಯನವರ ಹೆಂಡತಿ 1 ನೇ ವಾದಿ ಶಾಂತಮ್ಮ ಕೊಟ್ಟರು. ಜೊತೆಗೆ ಫಲಾನುಭವಿಗಳಿಗೆ ತಲಾ ರೂ. 3 ಸಾವಿರ ಕೊಟ್ಟಂತೆ ರಸೀದಿಗಳನ್ನು ಹಾಜರು ಮಾಡಿರುವುದು ನನಗೆ ಗೊತ್ತಿದೆ ಎಂದರೆ ಸರಿ. ರಸೀದಿಗಳಲ್ಲಿ ಹಣ ಕೊಟ್ಟವರ, ಪಾಲುದಾರರ ಮತ್ತು ಹಣ ಪಡೆದವರ ಸಹಿಗಳು ಇಲ್ಲವೆಂದರೆ ಸರಿ. ಚನ್ನಯ್ಯ ಮತ್ತು ಪ್ರತಿವಾದಿಯ ಹೆಸರುಗಳಲ್ಲಿ ನಿಪಿ1 ರಿಂದ ನಿಪಿ67 ನ್ನು ನಾವೇ ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ರಿಯಲ್ ಎಸ್ಟೇಟ್ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಭೂಪರಿವರ್ತನೆ ಆದೇಶ ಮಾಡಿ ಟೌನ್ ಪ್ಲಾನಿಂಗ್ ಅಥಾರಿಟಿಯವರು ಅನುಮತಿ ಕೊಟ್ಟ ನಂತರವೇ ನಿವೇಶನಗಳ ಮಾರಾಟ ಮಾಡಬೇಕಾಗುತ್ತದೆ ಎಂದರೆ ಸರಿ. ಅದಕ್ಕಿಂತ ಮುಂಚೆಯೇ 2016 ಮತ್ತು 2018 ನೇ ಇಸವಿಗಳಲ್ಲಿ ನಿವೇಶನಗಳನ್ನು ಕೊಡುತ್ತೇವೆ ಎಂದು ಹಲವಾರು ಜನರಿಂದ ಹಣ ಪಡೆದು ರಸೀದಿಗಳನ್ನು ನೀಡಿದ್ದೇವೆ ಎಂದರೆ ಸರಿ. 67 ಜನರಿಗೆ ನಿವೇಶನ ಕೊಡುತ್ತೇವೆಂದು ಹಣ ಪಡೆದು ಮೋಸ ಮಾಡಿದ್ದಲ್ಲಿ ಚನ್ನಯ್ಯ ಮತ್ತು ಪ್ರತಿವಾದಿಯ ವಿರುದ್ಧ ವಂಚನೆಯ ಪ್ರಕರಣಗಳು ದಾಖಲಾಗಿರುತ್ತಿದ್ದವು ಎಂದರೆ ನಾವು ಆ ಜನರಿಗೆ ಹಣ ವಾಪಸ್ಸು ನೀಡಿ ಅವರಿಂದ ದಾಖಲೆಗಳನ್ನು ಪಡೆದು ದಾವೆ ಹಾಕಿದ್ದೇವೆ.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ*** ಮುಂದುವರೆದ ***ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು)***

ಮಧ್ಯಾಹ್ನ **2.45** ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಎನ್.ಎಲ್. ವಕೀಲರಿಂದಃ

05. ದಾವಾ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿದ್ದು ಅದರ ಸಂಪೂರ್ಣ ಹಕ್ಕು ಪ್ರತಿವಾದಿಗೆ ಇರುತ್ತದೆ ಎಂದರೆ ಸರಿ. ನಾನು ತಲಾ ರೂ. 3 ಸಾವಿರ ಪಡೆದು ರಸೀದಿ ಕೊಟ್ಟವರಿಗೆ ಅವರ ಹಣವನ್ನು ವಾಪಸ್ಸು ಮಾಡಿದ್ದೇನೆ ಎಂದು ಹೇಳುತ್ತಿದ್ದು ಯಾವ ಅಧಿಕಾರದಿಂದ ಅವರಿಗೆ ಆ ಹಣವನ್ನು ವಾಪಸ್ಸು ಮಾಡಿದ್ದೆ ಎಂದರೆ ಶೇ. 50 ರಷ್ಟು ಜಾಯಿಂಟ್ ವೆಂಚರ್ ಇದ್ದಿದ್ದರಿಂದ ಆ ರೀತಿ ಪಾವತಿ ಮಾಡಿದ್ದೇನೆ.

ನಾನು ಹೇಳುವಂತೆ ಪ್ರತಿವಾದಿಯು ನಿಪಿ1 ರಿಂದ ನಿಪಿ67 ಕರಾರು ಪತ್ರಗಳನ್ನು ಬರೆದುಕೊಟ್ಟಿರುವುದು ನಿಜವೇ ಆಗಿದ್ದರೇ ಸದರಿ ದಾಖಲೆಗಳಲ್ಲಿ ನಿವೇಶನ ಸಂಖ್ಯೆ ಮತ್ತು ಅವುಗಳ ಚೆಕ್ಕುಬಂದಿ ನಮೂದು ಮಾಡಿರುತ್ತಿದ್ದರು ಎಂದರೆ ಆಗ ಇನ್ನೂ ಎನ್.ಎ. ಆಗಿರಲಿಲ್ಲವಾದ್ದರಿಂದ ಸೈಟ್ ನಂಬರ್ ಮತ್ತು ಚೆಕ್ಕುಬಂದಿ ನಮೂದಾಗಿಲ್ಲ. ಪ್ರತಿವಾದಿಯು ನಿಪಿ1 ರಿಂದ ನಿಪಿ67 ನ್ನು ಬರೆದು ಕೊಡದೇ ನಾವೇ ಅವುಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿರುವುದರಿಂದ ಈ ದಾಖಲೆಗಳಲ್ಲಿ ಬಿಕ್ಕಲಂದಾರರ ಸಹಿ, ಹಣ ಕೊಟ್ಟವರ ಸಹಿ ಮತ್ತು ಇತರೆ ವಿವರಗಳು ನಮೂದಾಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಗೊತ್ತಿದೆಯೇ? ಎಂದರೆ ನೆನಪಿಲ್ಲ. ಪ್ರತಿವಾದಿಯೇ ನಿವೇಶನಗಳನ್ನು ಮಾರಾಟ ಮಾಡಲು ಇಚ್ಛಿಸಿದ್ದರೆ ಕರಾರುಗಳ ಎರಡೂ ಬದಿಗಳಲ್ಲಿ ಟೈಪ್ ಮಾಡಿಸಿ ಸಹಿಗಳನ್ನು ಮಾಡಿಸಿ ಹಾಜರು ಮಾಡಿರುತ್ತಿದ್ದರು ಎಂದರೆ ಸರಿಯಲ್ಲ. ನಾನು ಮೊದಲನೇ ಅಗ್ರೀಮೆಂಟ್ ನಲ್ಲಿ ಪಾಲುದಾರನಾಗಿ ರೂ. 28 ಲಕ್ಷ ಬಂಡವಾಳ ಹಾಕಿರುವುದು ನಿಜವೋ ಅಥವಾ 2ನೇ ಅಗ್ರೀಮೆಂಟ್ ನಲ್ಲಿ ಪಾಲುದಾರನಾಗಿ ರೂ. 28 ಲಕ್ಷ ಬಂಡವಾಳ ಹಾಕಿರುವುದು ನಿಜವೋ? ಎಂದರೆ ಎರಡೂ ನಿಜವಿರುತ್ತವೆ. ನಿಪಿ1 ಕರಾರಿನಲ್ಲಿ ನಾನು ಕೇವಲ ಸಾಕ್ಷಿ ಸಹಿ ಮಾಡಿರುವುದರಿಂದ ನಾನು ಸದರಿ ಕರಾರಿನ ಪಾಲುದಾರರಲ್ಲ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಕೇವಲ 1 ನೇ ಪಕ್ಷಕಾರ ಮತ್ತು 2 ನೇ ಪಕ್ಷಕಾರ ಎಂದು ಮಾತ್ರ ಇದ್ದು, 3 ನೇ ಪಕ್ಷಕಾರನೆಂದು ನನ್ನ ಹೆಸರಿಲ್ಲವೆಂದರೆ ಸರಿ. ನಾನು ಕೇವಲ ಸಾಕ್ಷಿ ಸಹಿ ಮಾಡಿ ಪ್ರತಿವಾದಿಯಿಂದ ಹಣ ಹೊಣೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನೂ ಕೂಡಾ ಪಾಲುದಾರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ2 ರಲ್ಲೂ ಕೂಡಾ ನಾನು ಸಾಕ್ಷಿ ಸಹಿ ಮಾತ್ರ ಮಾಡಿದ್ದೇನೆ ಎಂದರೆ ಸಾಕ್ಷಿಯವರು ನನಗೆ ಹಕ್ಕು ಇದೆ ಆದ್ದರಿಂದ ನಿಪಿ2 ಕ್ಕೆ ಸಾಕ್ಷಿ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಾವು ನಾಲ್ಕೂ ಜನ ಸೇರಿ ಅಗ್ರೀಮೆಂಟ್ ಮಾಡಿಕೊಂಡಿದ್ದಲ್ಲಿ ನಮ್ಮ ನಾಲ್ಕೂ ಜನರ ಹೆಸರುಗಳು, ಅದಕ್ಕೆ ಸಾಕ್ಷಿಗಳು ಮತ್ತು ಬಿಕ್ಕಲಂದಾರರ ಸಹಿಗಳು ಇರುತ್ತಿದ್ದವು ಎಂದರೆ ಸರಿ. ನಿಪಿ1 ಮತ್ತು ನಿಪಿ2 ರಲ್ಲಿ ಸಾಕ್ಷಿದಾರನಾಗಿ ನನ್ನ ಸಹಿಗಳನ್ನು ಬಿಟ್ಟರೆ ಪಾಲುದಾರನೆಂದು ನನ್ನ ಹೆಸರು ಉಲ್ಲೇಖವಾಗಿದೆಯೇ? ಎಂದರೆ 2019 ನೇ ಇಸವಿಯ ದಾಖಲೆಯಲ್ಲಿ ಪಾಲುದಾರನೆಂದು ನಮೂದಾಗಿದೆ. ಸಾಕ್ಷಿಯಾಗಿ ಸಹಿ ಮಾಡಿದ್ದರೂ ಪಾಲುದಾರನಾಗಿ ಹಕ್ಕು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಆಸ್ತಿಯ ಬಗ್ಗೆ ಮೊದಲನೇ ಕರಾರು ರದ್ದಾಗದ ಹೊರತು 2 ನೇ ಕರಾರು ಮಾಡಿಕೊಳ್ಳಲು ಅವಕಾಶವಿಲ್ಲವೆಂದು ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. 2016 ರಿಂದ 2019 ನೇ ಇಸವಿವರೆಗೆ ಚನ್ನಯ್ಯ ಬದುಕಿದ್ದರು ಎಂದರೆ ಸರಿ. ಸದರಿ ಅವಧಿಯಲ್ಲಿ ಚನ್ನಯ್ಯ ಮತ್ತು ಪ್ರತಿವಾದಿಯ ನಡುವೆ ಹಣಕಾಸಿನ ವಿಚಾರದಲ್ಲಿ ಯಾವುದೇ ವಿವಾದ ಉಂಟಾಗಿದ್ದರೆ ಚನ್ನಯ್ಯನೇ ದಾವೆ ಹಾಕಿರುತ್ತಿದ್ದರು ಎಂದರೆ ದಾವೆ ಹಾಕುವಷ್ಟರಲ್ಲಿ ಚನ್ನಯ್ಯ ತೀರಿಕೊಂಡಿದ್ದರಿಂದ ಅವರ ಹೆಂಡತಿ ಮಕ್ಕಳು ದಾವೆ ಹಾಕಿದ್ದಾರೆ.

ವಾದಿಗಳಾದ ನಾವು ಚನ್ನಯ್ಯ ಮತ್ತು ಪ್ರತಿವಾದಿಯ ನಡುವೆ ಆಗಿದ್ದ ಕರಾರಿನ ರೀತಿಯಲ್ಲೇ ಕರಾರುಗಳನ್ನು ಸೃಷ್ಟಿಸಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. 2018ರ ಕರಾರನ್ನು 2021 ನೇ ಇಸವಿ ವರೆಗೆ ಯಾಕೆ ರಿಜಿಸ್ಟರ್ ಮಾಡಿಸಲಿಲ್ಲ? ಎಂದರೆ ಪ್ರತಿವಾದಿ ಹಣ ಕೊಡುತ್ತಾರೆ ಎಂದು ಸುಮ್ಮನೇ ಇದ್ದೆವು. ನಾನು ಪಾಲುದಾರನೆಂದು ಹೇಳಿದ್ದು, ಯಾವ ಕಾರಣಕ್ಕೆ ಪ್ರತಿವಾದಿಯು ನನಗೆ ಹಣ ಕೊಡಬೇಕಾಗುತ್ತದೆ? ಎಂದರೆ ಪ್ರತಿವಾದಿಯು ನಮ್ಮನ್ನು ಜಮೀನಿಗೆ ಪ್ರವೇಶ ಮಾಡದಂತೆ ತಡೆದಿದ್ದರಿಂದ ನಾವು ಕೊಟ್ಟ ಹಣಕ್ಕೆ ಬಡ್ಡಿ ಸಮೇತ ವಾಪಸ್ಸು ಕೊಡಿ ಎಂದು ಕೇಳಿದ್ದೆವು. ನಮ್ಮ ಕರಾರಿನಲ್ಲಿ ಪ್ರತಿವಾದಿಯು ಆತನ ಭಾಗದ ಕರಾರನ್ನು ನೆರವೇರಿಸದೇ ಇದ್ದಲ್ಲಿ ನಮ್ಮ ಹಣವನ್ನು ಬಡ್ಡಿ ಸಮೇತ ವಾಪಸ್ಸು ಕೊಡಬೇಕೆಂಬ ಷರತ್ತು ಇದೆಯೇ? ಎಂದರೆ ಇರುವುದಿಲ್ಲ. ಪ್ರತಿವಾದಿಯು ನಮ್ಮನ್ನು ಜಮೀನಿಗೆ ಪ್ರವೇಶ ಮಾಡದಂತೆ ಮತ್ತು ಅದರ ಅಭಿವೃದ್ಧಿ ಮಾಡದಂತೆ ತಡೆಯುತ್ತಿದ್ದಾರೆಂದು ಪೊಲೀಸರಿಗೆ ದೂರನ್ನು ಕೊಟ್ಟಿದ್ದೀರಾ? ಎಂದರೆ ಕೊಟ್ಟಿಲ್ಲ. ಪ್ರತಿವಾದಿಯು ನಮಗೆ ಯಾವುದೇ ಕರಾರು ಬರೆದುಕೊಟ್ಟಿಲ್ಲ ಮತ್ತು ನಮಗೆ ಯಾವುದೇ ರೀತಿಯಲ್ಲಿ ಅಡ್ಡಿಪಡಿಸದೇ ಇದ್ದರೂ ನಾವೇ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ಕರಾರು ನಿವೇಶನ ರಚನೆ ಮಾಡುವ ಬಗ್ಗೆಯೋ ಅಥವಾ ಭೂಪರಿವರ್ತನೆ ಮಾಡಿಸಿಕೊಳ್ಳುವ ಬಗ್ಗೆ ಆದ ಕರಾರು ಎಂದರೆ ಭೂಪರಿವರ್ತನೆ ಮಾಡಿಸಿಕೊಳ್ಳುವ ಬಗ್ಗೆ ಆಗಿದ್ದ ಕರಾರು. ಇನ್ನೂ ಭೂಪರಿವರ್ತನೆಯೇ ಆಗದೇ ಇದ್ದಾಗ ಪ್ರತಿವಾದಿಯು ನಮ್ಮಿಂದ ರೂ. 29 ಲಕ್ಷ ಪಡೆದು ಸೈಟುಗಳನ್ನು ರಚಿಸಿ ನಮಗೆ ಹಂಚಿಕೊಡಲು ಹೇಗೆ ಸಾಧ್ಯವಾಗುತ್ತದೆ? ಎಂದರೆ ಜಮೀನು ಬೇರೆಯವರ ಹೆಸರಿನಲ್ಲಿ ಇತ್ತು, ಅದನ್ನು ಪ್ರತಿವಾದಿಯ ಹೆಸರಿಗೆ ಮಾಡಿಸಿಕೊಳ್ಳಲು ನಾವು ಹಣ ಕೊಟ್ಟಿದ್ದೆವು. ನಾನು ಹಾಜರು ಮಾಡಿರುವ ದಾಖಲೆಗಳ ಪ್ರಕಾರ ಜಮೀನು ಪ್ರತಿವಾದಿಯ ಹೆಸರಿನಲ್ಲೇ ಇರುವುದು ಕಂಡುಬರುತ್ತದೆ ಎಂದರೆ ಇ.ಸಿ.ಯಲ್ಲಿ ಬೇರೆಯವರ ಹೆಸರು ಬರುತ್ತಿದ್ದುದನ್ನು ತೆಗೆದು ಹಾಕಿಸಲು ಹಣ ಕೊಟ್ಟಿದ್ದೆವು. ಪ್ರತಿವಾದಿಯು ಅಗ್ರೀಮೆಂಟ್ ಮಾಡಿಕೊಂಡರೂ ಭೂಪರಿವರ್ತನೆ ಮಾಡಿಸದೇ ನಮಗೂ ಭೂಮಿಯ ಅಭಿವೃದ್ಧಿ ಮಾಡಲು ಬಿಡದೇ ಮೋಸ ಮಾಡುತ್ತಿದ್ದಾರೆಂದು ಪೊಲೀಸರಿಗೆ ದೂರು ಕೊಟ್ಟಿದ್ದೀರಾ? ಎಂದರೆ ಕೊಟ್ಟಿಲ್ಲ. ನಿಪಿ1 ರಲ್ಲಿ ರಚಿಸಲಿರುವ ನಿವೇಶನಗಳ ಬಗ್ಗೆ ಚನ್ನಯ್ಯ ಮತ್ತು ಪ್ರತಿವಾದಿಗೆ ಮಾತ್ರ ಹಕ್ಕು ಇರುವುದಾಗಿ ಸಾಕ್ಷಿ ಸಹಿ ಮಾಡಿದವರಿಗೆ ಹಕ್ಕು ಇಲ್ಲವೆಂದು 11 ನೇ ಷರತ್ತಿನಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. 4 ರಿಂದ 6 ನೇ ವಾದಿಗಳಿಗೂ ಮತ್ತು ಚನ್ನಯ್ಯ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. 67 ಜನ ಬಾಂಡ್ ಪತ್ರ ಪಡೆದುಕೊಂಡವರನ್ನು ವಾದಿಗಳನ್ನಾಗಿ ಮಾಡಿ ದಾವೆ ಹಾಕುವ ಬದಲು ನಾವೇ ಏಕೆ ಅವರಿಗೆ ಹಣ ಕೊಟ್ಟು ದಾವೆ ಹಾಕಿದ್ದೇವೆ ಎಂದರೆ ಎಲ್ಲರೂ ಕೋರ್ಟಿಗೆ ಬರಲಿಕ್ಕೆ ಆಗುವುದಿಲ್ಲವೆಂದು ಆ ರೀತಿ ಮಾಡಿದ್ದೇವೆ. ಅಂತಹ 67 ಜನ ವ್ಯಕ್ತಿಗಳು ಯಾರೂ ಇಲ್ಲದೇ ಇದ್ದರೂ ನಾವೇ ಈ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಾನು ಹಾಜರು ಮಾಡಿದ ರಸೀದಿಗಳ ಮೇಲೆ ಪ್ರತಿವಾದಿ ಹಣ ಸ್ವೀಕರಿಸಿರುವ ಬಗ್ಗೆ ಆತನ ಸಹಿಗಳು ಇರುತ್ತವೆಯೇ? ಎಂದರೆ ಇರುತ್ತವೆ. ಪ್ರತಿವಾದಿಯ ಸಹಿಗಳು ಇಲ್ಲದೇ ಇದ್ದರೂ ಇರುತ್ತವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನಯ್ಯ ಬದುಕಿದ್ದಾಗ ದಾವೆ ಹಾಕಿದರೆ ನಿಜ ಸಂಗತಿ ಗೊತ್ತಾಗುತ್ತದೆಂದು ಅವರು ತೀರಿಕೊಂಡ ನಂತರ ಸುಳ್ಳು ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. (ದಾವೆಯ 1 ರಿಂದ 3 ನೇ ವಾದಿಗಳಿಗೆ ಏರ್ ಮೇಲ್ ಮೂಲಕ ಸಮನ್ಸ್ ಜಾರಿ ಮಾಡಿದ ಕುರಿತು ಸಾಕ್ಷಿಗೆ ಪ್ರಶ್ನೆ ಕೇಳಲು ವಾದಿಗಳ ಪರ ವಕೀಲರು ತಕರಾರು ಮಾಡಿದ್ದು, ಸದರಿ ತಕರಾರನ್ನು ತಳ್ಳಿಹಾಕಿ ಪ್ರಶ್ನೆ ಕೇಳಲು ಅನುಮತಿ ನೀಡಲಾಗಿದೆ). ಪ್ರತಿವಾದಿ ಸಲ್ಲಿಸಿದ್ದ ಎಂ.ಎ. ನಂ. 5007/2022 ರಲ್ಲಿ ಎದುರುದಾರರಾಗಿದ್ದ 2 ನೇ ವಾದಿಗೆ ಅವರು ವಿದೇಶದಲ್ಲಿದ್ದ ಕಾರಣ ಏರ್ ಮೇಲ್ ಮೂಲಕ ಸಮನ್ಸ್ ಜಾರಿ ಮಾಡಿದರೂ ಅವರು ಹಾಜರಾಗದೇ ಇರುವುದು 2 ನೇ ವಾದಿಗೆ ದಾವೆಯಲ್ಲಿ ಹಿತಾಸಕ್ತಿ ಇಲ್ಲ ಎಂಬುದನ್ನು ಸೂಚಿಸುತ್ತದೆ ಎಂದರೆ 2 ನೇ ವಾದಿಯನ್ನು ನಾನು ಹಾಜರು ಮಾಡಬಲ್ಲೆ. ಚನ್ನಯ್ಯನವರ ಹೆಂಡತಿ ಮತ್ತು ಮಕ್ಕಳಾಗಿ 1 ರಿಂದ 3 ನೇ ವಾದಿಗಳು ಈ ದಾವೆಯಲ್ಲಿ ಸಾಕ್ಷಿ ಹೇಳಲು ಬರದೇ 4 ನೇ ವಾದಿಯಾದ ನಾನೇ ಸಾಕ್ಷಿ ಹೇಳುತ್ತಿರುವುದರಿಂದ ನಾನು ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿರುವುದನ್ನು ದೃಢಪಡಿಸುತ್ತದೆ ಎಂದರೆ 1 ನೇ ವಾದಿ ಶಾಂತಮ್ಮನನ್ನು ಸಾಕ್ಷಿ ವಿಚಾರಣೆ ಮಾಡುತ್ತೇನೆ. 2018 ನೇ ಇಸವಿಯ ಅಗ್ರಿಮೆಂಟ್ ನಿಜವಾಗಿಯೂ ಆಗಿದ್ದಲ್ಲಿ ಚನ್ನಯ್ಯ ಮತ್ತು ಪ್ರತಿವಾದಿ ಅದನ್ನು ನೋಂದಣಿ ಮಾಡಿಸಿರುತ್ತಿದ್ದರು ಆದ್ದರಿಂದ ಅಂತಹ ಯಾವುದೇ ಅಗ್ರಿಮೆಂಟ್ ಆಗಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ವಾದಿಗಳಿಗೆ ಮತ್ತು ಪ್ರತಿವಾದಿಗೆ ಮೋಸ ಮಾಡಿ ದಾವಾ ಮೊತ್ತವನ್ನು ನಾನೊಬ್ಬನೇ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗೆ ಕೇವಲ ಸಾಕ್ಷಿ ಸಹಿ ಮಾಡಿದ ವ್ಯಕ್ತಿಯಾಗಿದ್ದು ನನಗೆ ದಾವೆ ಹಾಕುವ ಯಾವುದೇ ವ್ಯಾಜ್ಯ ಕಾರಣ ಅಥವಾ ಅರ್ಹತೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ